## ವ್ಯಾಪಾರೀಕರಣದತ್ತ ‘ಆಪ್ತತೆ’?

‘ಸಮಾಲೋಚನೆ; ಆಪ್ತ–ಯಾತನೆ’ (ಮಾ.2, ರಾಜಲಕ್ಷ್ಮಿ ಕೋಡಿಬೆಟ್ಟು) ಮುಖಪುಟ ಲೇಖನ ಗಂಭೀರ ಸಮಸ್ಯೆಯನ್ನು ಎತ್ತಿತೋರಿದೆ. ದೈಹಿಕ, ಮಾನಸಿಕ ಸಮಸ್ಯೆಗಳನ್ನು ತಂದೊಡ್ಡುತ್ತಿರುವ ಈ ಆಧುನಿಕ ಜೀವನಶೈಲಿಯಲ್ಲಿ ಮನುಷ್ಯನಿಗೆ ಸಮಸ್ಯೆಗಳನ್ನು ಎದುರಿಸುವ ಬಲ ತುಂಬುವುದು ಹಿಂದೆಂದಿಗಿಂತ ಹೆಚ್ಚಿನ ಅಗತ್ಯ. ಈ ಕೆಲಸ ಆಪ್ತ ಸಮಾಲೋಚನೆಯಿಂದ ಸಾಧ್ಯವಾಗಬೇಕು. ಆದರೆ ಅದಕ್ಕೆ ಸೂಕ್ತ ವಾತಾವರಣ ಸಮಾಲೋಚನಾ ಕೇಂದ್ರಗಳಲ್ಲಿಯೇ ಇಲ್ಲ ಎಂಬುದು ಆತಂಕಕಾರಿ. ಆಪ್ತ ಸಮಾಲೋಚನೆ ಕೂಡ ವ್ಯಾಪಾರೀಕರಣಗೊಂಡಂತೆ ಕಾಣುತ್ತಿದೆ.

–ಶಾಲ್ಮಲಾ, ಬೆಂಗಳೂರು

## ವ್ಯವಧಾನ ಬೇಕಿದೆ

ಆಪ್ತಸಮಾಲೋಚನೆ ಕುರಿತ ಲೇಖನ ವಸ್ತುನಿಷ್ಠವಾಗಿದೆ. ಈ ಯುಗದಲ್ಲಿ, ಹಲವು ವಿಷಯಗಳಲ್ಲಿ ಗೊಂದಲಕ್ಕೆ ಒಳಗಾಗುತ್ತಿರುವ



ಯುವಜನತೆಗೆ ಮಾರ್ಗದರ್ಶನ, ಸಲಹೆ – ಸಮಾಲೋಚನೆಗಳ ಅವಶ್ಯಕತೆ ಹೆಚ್ಚಿದೆ. ಆದರೆ ಮೌಲ್ಯವೇ ಇಲ್ಲದಂತೆ ಸಮಾಲೋಚನೆ ನಡೆಸಿದರೆ ಪ್ರಯೋಜನವೇನು? ಸಮಾಲೋಚನಾ ಕೇಂದ್ರಗಳ ಮೂಲಸೌಲಭ್ಯಗಳನ್ನು ಸುಧಾರಿಸುವುದರೊಂದಿಗೆ, ನೊಂದ ಮನಗಳಿಗೆ ಸಾಂತ್ವನ ನೀಡುವ ವ್ಯವಧಾನವೂ ಸಮಾಲೋಚಕರಿಗೆ ಇರಬೇಕಾಗಿದೆ.

–ವಿನೋದ್ ಕುಮಾರ್, ಚಿಕ್ಕಮಗಳೂರು

## ಆಪ್ತ ಯಾತನೆ!

‘ಸಮಾಲೋಚನೆ; ಆಪ್ತ–ಯಾತನೆ’ ಪೂರ್ವಗ್ರಹಪೀಡಿತ ಲೇಖನದಂತೆ ಕಂಡಿತು. ಆಪ್ತ ಸಮಾಲೋಚನೆ ಮತ್ತು ಆಪ್ತ ಸಮಾಲೋಚಕರ ಬಗ್ಗೆ ಜನರಲ್ಲಿ ಅವಿಶ್ವಾಸ ಉಂಟುಮಾಡುವಂತಿದೆ. ಸಮಾಲೋಚನೆಯ ನೆಗೆಟಿವ್ ಅನುಭವಗಳ ಉದಾಹರಣೆ ಜೊತೆಗೆ ಪಾಸಿಟಿವ್ ಉದಾಹರಣೆಗಳನ್ನೂ ಕೊಡಬೇಕಿತ್ತು. ತಮ್ಮಲ್ಲಿಗೆ ಬಂದ ವ್ಯಕ್ತಿಗಳಿಗೆ ಜೀವನ ಕೌಶಲಗಳನ್ನು ಕಲಿಸುವುದು ಮತ್ತು ಭಾವನಾತ್ಮಕ ಆಸರೆ ನೀಡುವುದೇ ಆಪ್ತ ಸಮಾಲೋಚನೆ ಗುರಿ. ಎಲ್ಲಾ ವೈದ್ಯಕೀಯ ಶಿಕ್ಷಣ ಕ್ಷೇತ್ರದಂತೆ ಆಪ್ತ ಸಮಾಲೋಚನಾ ಕ್ಷೇತ್ರವು ವಾಣಿಜ್ಯೀಕರಣಗೊಂಡಿರುವುದು ಸಾಮಾಜಿಕ ದುರಂತ. ಆದರೆ ನಿಸ್ವಾರ್ಥದಿಂದ ಕೆಲಸ ಮಾಡುವವರೂ ಇದ್ದಾರೆ.

–ಡಾ. ಸಿ. ಆರ್. ಚಂದ್ರಶೇಖರ್, ನಿವೃತ್ತ ಮನೋವೈದ್ಯ, ಪ್ರಾಧ್ಯಾಪಕ, ನಿಮ್ಹಾನ್ಸ್ ಹಾಗೂ ಸಮಾಧಾನ ಆಪ್ತ ಸಲಹಾ ಕೇಂದ್ರದ ಟ್ರಸ್ಟಿ

## ಮೆಚ್ಚುಗೆಯಾದ ಬರಹದ ಶೈಲಿ

‘ಎಲ್ಲದರ ತಾಪತ್ರಯ ಉದರಕ್ಕೆ...’ (ಮಾ.2, ಸುಮಾ ರಮೇಶ್) ಲೇಖನ ಬಹಳ ಚೆನ್ನಾಗಿದೆ. ಒಂದೇ ಉಸಿರಿಗೆ ಓದಿಸಿಕೊಂಡ ಬರಹದ ಶೈಲಿ ಮೆಚ್ಚುಗೆಯಾಯಿತು. ಮಂದಹಾಸವಲ್ಲ, ದೊಡ್ಡ ನಗುವನ್ನೇ ತಂದಿತು.

–ರಮಾಮಣಿ ಶಂಕರ್

## ಮನಸಾರೆ ನಗಿಸಿದ ಲೇಖನ

‘ಎಲ್ಲದರ ತಾಪತ್ರಯವೂ ಉದರಕ್ಕೆ’ ಹಾಸ್ಯ ಲೇಖನ ಮನಸಾರೆ ನಗಿಸಿತು. ಲೇಖನ, ಬಿ.ಜಿ.ಎಲ್.ಸ್ವಾಮಿಯವರ ‘ಹೊಟ್ಟೆಯಲ್ಲಿ ಅಮೆರಿಕಾ’ ಪುಸ್ತಕ ಜ್ಞಾಪಿಸಿತು.

–ಪುಷ್ಪಲತಾ

## ಸ್ವಾರಸ್ಯಕರ ವಿವರಣೆ

ಮಂದಹಾಸ ಲೇಖನ ಖುಷಿಕೊಟ್ಟಿತು. ಲೇಖನದಲ್ಲಿ ಉದರ, ನಾಲಿಗೆ, ಹಲ್ಲು ಮತ್ತು ಫೀಮೇಲ್ ಉದರದ ಬಗ್ಗೆ ವ್ಯಾಖ್ಯಾನ ಸೊಗಸಾಗಿತ್ತು. ಸ್ವಾರಸ್ಯಕರವಾಗಿ ಉದರ ಪೋಷಣೆ ಎಷ್ಟು ಅಗತ್ಯವೆಂದು ವರ್ಣಿಸಿದ ರೀತಿ ಇಷ್ಟವಾಯಿತು.

–ಅಂಚೆ ಸುಬ್ರಹ್ಮಣ್ಯ ಕೊಪ್ಪ



## ಮಾಹಿತಿಪೂರ್ಣ ಮರಗಳ ಕಥೆ

‘ಪರಿಮಳದ ಒಡತಿ ಜಾಲಾರಿ ಹೂ’ (ಮಾ.2, ವಿನು ಗಂಗೆ) ಮರಗಳ ಕಥೆ ಲೇಖನದಲ್ಲಿ ಸುಗಂಧಭರಿತ ಹೂಮರದ ಪರಿಚಯದ ಪರಿ ಸೊಗಸಾಗಿತ್ತು. ಮರಗಳ ವೈಶಿಷ್ಟ್ಯವನ್ನು ಲೇಖಕಿ ವಿವರಿಸುವ ಧಾಟಿ ಮೆಚ್ಚುಗೆಯಾಗುತ್ತದೆ.

–ನಾರಾಯಣಮೂರ್ತಿ, ಕೋಲಾರ

## ವೈಜ್ಞಾನಿಕ ಮಾಹಿತಿ ಗುಚ್ಛ

‘ಪ್ರಶ್ನಾಂಕಣ’ದಲ್ಲಿ ಎನ್. ವಾಸುದೇವ್ ಅವರು ವಿಜ್ಞಾನವನ್ನು ವಿವರಿಸುವ ಪರಿ ಅನನ್ಯ. ಒಮ್ಮೆ, ಚಿಕ್ಕವರಿದ್ದಾಗ ತಾಯಿಯ ತವರುಮನೆಗೆ ಹೋಗಿದ್ದ ಸಂದರ್ಭ ರಾತ್ರಿ ಅಂಗಳದಲ್ಲಿ ಮಲಗಿದ್ದೆವು. ಅರ್ಧರಾತ್ರಿ ಎಚ್ಚರವಾದಾಗ ಆಕಾಶದಲ್ಲಿ ಕಂಡ ನಕ್ಷತ್ರಗಳು ಊಹಾತೀತ. ಇಡೀ ಆಕಾಶ ನಕ್ಷತ್ರಗಳ ಜರಡಿಯಂತಿತ್ತು. ಈಗ ನೆನಪಿಸಿಕೊಂಡರೆ ಆಗ ಕಂಡಿದ್ದು ಭ್ರಮೆ ಇರಬಹುದೇನೋ ಅನಿಸುವಷ್ಟರ ಮಟ್ಟಕ್ಕೆ! ಈ ಬಾರಿ ‘ಗೋಚಾರ ನಕ್ಷತ್ರಗಳ ಸಂಖ್ಯೆ ಎಷ್ಟು?’ ಓದಿ ಈ ಸಂಗತಿ ನೆನಪಿಗೆ ಬಂತು.

–ಎ. ಜಾನಕಿರಾಮ್, ಬೆಂಗಳೂರು

## ಅಪರೂಪದ ಕಥೆ

‘ಸಾಮಾನ್ಯ’ (ಮಾ.2, ಮಧುರಾ ಕರ್ಣಮ್) ಅಪರೂಪದ ಕಥೆ. ಆರ್ಥಿಕ ಹಿನ್ನಡೆ, ಅಂಧಾನುಕರಣೆ, ಕುಟುಂಬ ವ್ಯವಸ್ಥೆಯ ಆರೋಗ್ಯವನ್ನು ಬುಡಮೇಲು ಮಾಡುವುದರ ಜತೆ ತನ್ನವರನ್ನು ತಮ್ಮ ಅಲ್ಪ ವಿಚಾರದ ದೋಷದಿಂದಲೇ ಕಳೆದುಕೊಳ್ಳುವ ಸಾಮಾಜಿಕ ದುರಂತವನ್ನು ತೆರೆದಿಟ್ಟಿದೆ. ಮಕ್ಕಳ ಮಿತಿಯನ್ನು



ಅರಿಯದೇ ಅವರ ಮೇಲೆ ಹೊರೆ ಹಾಕುವ ಹಾಗೂ ಇಂದಿನ ಸಮಾಜದ ಓರೆಕೋರೆಯ ಸಹಜ ಚಿತ್ರಣ ಕೆಲವರನ್ನಾದರೂ ಎಚ್ಚರಿಸಿದರೆ ಸಾಕು.

–ರಾಮಕೃಷ್ಣ ನಾಯಕ, ಧಾರವಾಡ

## ಸಮಯೋಚಿತ ವಸ್ತುವಿಷಯ

‘ಸಾಮಾನ್ಯ’ ಕಥೆ ಸಮಯೋಚಿತವಾಗಿದೆ. ಪೋಷಕರ ಕೌಟುಂಬಿಕ ಹಿನ್ನೆಲೆ, ಆರ್ಥಿಕ ಸ್ಥಿತಿಗತಿ ಅವಲಂಬಿಸಿ ಶಾಲೆಯಲ್ಲಿ ಮಕ್ಕಳಿಗೆ ಸಿಗಬೇಕಾದ ಗೌರವ– ಸ್ಥಾನಮಾನ ನಿರ್ಧಾರವಾಗುತ್ತದೆ. ಇದು ಬೇಸರದ ಸಂಗತಿ. ಆದರೆ ಪೋಷಕರು ಮಕ್ಕಳ ಮೇಲೆ ಅನವಶ್ಯಕ ಒತ್ತಡ ಹೇರಬಾರದು.

–ಜೀವಿ ಗೊಂಡೇದಹಳ್ಳಿ

## ಸರಳ ವಿಷಯ-ಪರಿಣಾಮಕಾರಿ ಕಥೆ

‘ಸಾಮಾನ್ಯ’ ಸರಳ, ಸುಂದರ ಕಥೆ. ಪ್ರತಿ ಮನೆಯಲ್ಲೂ ತಂದೆ ತಾಯಿ ಮಕ್ಕಳ ಮೇಲೆ ತಮ್ಮ ಆಸೆಗಳನ್ನು ಹೇರದೆ ಅವರ ಆಸೆಗೆ ಸ್ಪಂದಿಸಿದರೆ ಮಕ್ಕಳಿಗೆ ಅದೇ ಸ್ವರ್ಗ. ಈ ಮಾತನ್ನು ಕಥೆ ಸ್ಫುಟವಾಗಿ ತೆರೆದಿಟ್ಟಿದೆ.

–ವಿಜಯಾ ಪ್ರಸಾದ್, ಬೆಂಗಳೂರು

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in